# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 25(133)

ಮಾನ್ಯ ಸದಸ್ಯರ ಹೆಸರು : ಶ್ರೀ. ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 15.07.2024

ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಸರ್ಕಾರವು ಕುಟುಂಬ ಯೋಜನೆಯನ್ನು ಪ್ರೋತ್ಸಾಹಿಸಲು ಕೈಗೊಂಡಿರುವ ಕಾರ್ಯಕ್ರಮಗಳಾವುವು; | ಸರ್ಕಾರವು ಕುಟುಂಬ ಯೋಜನೆಯನ್ನು ಪ್ರೋತ್ಸಾಹಿಸಲು ಈ ಕೆಳಕಂಡ ಯೋಜನೆಗಳನ್ನು ಕಾರ್ಯರೂಪದಲ್ಲಿ ತಂದಿರುತ್ತದೆ.<br>1. ಹೋಂ ಡೆಲಿವರಿ ಕಾನ್ಟ್ರಾಸೆಪ್ಟಿವ್ (HDC)<br>2. ಇ.ಎಸ್.ಬಿ 1 & 2 ಯೋಜನೆ (Ensure spacing for Birth)<br>3. ಪಿ.ಟಿ.ಕೆ ವಿತರಣಾ ಯೋಜನೆ<br>4. ಕುಟುಂಬ ಕಲಾಣ ಕಾರ್ಯಕ್ರಮದಲ್ಲಿ ಪರಿಹಾರ ಧನ ನೀಡುವ ಯೋಜನೆ (FPIS)<br>5. ಗರ್ಭ ನಿರೋಧಕ ಬಳಕೆ ಫಲಾನುಭವಿಗಳಿಗೆ ಪ್ರೋತ್ಸಾಹಧನ |
| ಆ) | ತುಮಕೂರು ಜಿಲ್ಲೆ ವ್ಯಾಪ್ತಿಯ ತಾಲ್ಲೂಕು ಆಸ್ಪತ್ರೆಗಳಲ್ಲಿ ಸಂತಾನ ಹರಣ ಶಸ್ತ್ರಚಿಕಿತ್ಸೆ ನಡೆಸಲು ಸೂಕ್ತ ಸೌಲಭ್ಯಗಳನ್ನು ಸರ್ಕಾರದಿಂದ ಒದಗಿಸಲಾಗಿದೆಯೇ; | ಒದಗಿಸಲಾಗಿದೆ. |
| ಇ) | 2024ನೇ ಸಾಲಿನಲ್ಲಿ ಪಾವಗಡ ತಾಲ್ಲೂಕು ಆಸ್ಪತ್ರೆಯಲ್ಲಿ ಸಂತಾನ ಹರಣ ಮತ್ತು ಗರ್ಭಕೋಶದ ಚಿಕಿತೆಗೆ ಒಳಗಾದ 3 ಮಹಿಳೆಯರು ಸಾವನ್ನಪ್ಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | ಬಂದಿದೆ.<br>ಪಾವಗಡ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಪರೇಷನ್ ಕೈಗೊಳುವ ಮುನ್ನ ಓ.ಟಿ ಕೊಠಡಿಯನ್ನು ಸ್ಟೆರಿಲೈಸೇಷನ್ ಮಾಡದೇ ಇರುವುದರಿಂದ ಶಸ್ತ್ರಚಿಕಿತ್ಸೆಗೊಳಗಾದ 3 ಮಹಿಳೆಯರು ಸಾವನ್ನಪ್ಪಿದ್ದು, ಇದಕ್ಕೆ ಕರ್ತವ್ಯ ನಿರ್ಲಕ್ಷತನ ಹಾಗೂ ಬೇಜವಬ್ದಾರಿತನಕ್ಕೆ ಕಾರಣರಾದ ಶ್ರೀಮತಿ ಮಾರಕ್ಕ ಬಿ, ಶುಶ್ರೂಷಕರು ಹಾಗೂ ಶ್ರೀಮತಿ ನಾಗರತ್ನಮ್ಮ ಕೆ, ಶುಶ್ರೂಷಕರು ಇವರುಗಳನ್ನು ಈ ಕಛೇರಿಯ ಆದೇಶ ಸಂಖ್ಯೆ: ಜಿಆತು/ಡಿಪಿಎನ್/23/2023-24, ದಿ:27/2/2024 ರಂತೆ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ. ಹಾಗೂ ಎನ್.ಹೆಚ್.ಎಂ ಅಡಿಯಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ\|\|ಪೂಜಾ ಇವರನ್ನು ವಜಾಗೊಳಿಸಲಾಗಿದೆ. ಹಾಗೂ ಸದರಿ ಪ್ರಕರಣವು ಪುನರಾವರ್ತಿಸದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಲು ವೈದ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ.<br>ಸದರಿ ಮರಣ ಪ್ರಕರಣಕ್ಕೆ FPIS ಯೋಜನೆಯಡಿಯಲ್ಲಿ ಪರಿಹಾರಧನವನ್ನು ನೀಡಲು ಕ್ರಮ ಕೈಗೊಂಡಿದೆ. |

| | | |
|---|---|---|
| ಈ) | 2024ರ ಮಾರ್ಚ್ ತಿಂಗಳಲ್ಲಿ ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನಲ್ಲಿ ಅರಿವಳಿಕೆ ನೀಡದೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿದ ಪರಿಣಾಮ ಮಹಿಳೆ ಅಸ್ವಸ್ಥರಾದ ಘಟನೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ರೀತಿ ಬೇಜವಾಬ್ದಾರಿಯಿಂದ ವರ್ತಿಸಿದ ವೈದ್ಯರ ಮೇಲೆ ಸರ್ಕಾರ ಕೈಗೊಳ್ಳಡಿರುವ ಕ್ರಮವೇನು? | 2024 ರ ಮಾರ್ಚ್ ತಿಂಗಳಲ್ಲಿ ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನಲ್ಲಿ ದಿನಾಂಕ:19/03/2024 ರಂದು ಮೂವರು ಮಹಿಳೆಯರು ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಸ್ಥಳೀಯ ಅರವಳಿಕೆಯಲ್ಲಿ ಒಳಪಟ್ಟಿರುತ್ತಾರೆ. ಸದರಿ ಮಹಿಳೆಯು ಮೂರನೆಯವರಾಗಿದ್ದು, ಶಸ್ತ್ರಚಿಕಿತ್ಸೆ ಮಾಡುವಾಗ ಸಹಕರಿಸಿರುವುದಿಲ್ಲವಾದ್ದರಿಂದ ಶಸ್ತ್ರ ಚಿಕಿತ್ಸೆಯನ್ನು ನಿಲ್ಲಿಸಲಾಗಿತ್ತು, ಕುಟುಂಬ ಕಲ್ಯಾಣ ಯೋಜನೆಯ ತಾತ್ಕಾಲಿಕ ವಿಧಾನಗಳನ್ನು ಅಳವಡಿಸಲು ಮಹಿಳೆಯೊಂದಿಗೆ ಸಮಾಲೋಚನೆ ಮಾಡಿ ತಿಳಿಸಿದ 3 ತಿಂಗಳ ನಂತರ ಸದರಿ ಮಹಿಳೆಯಜಿಲ್ಲಾ ಆಸ್ಪತ್ರೆಯಲ್ಲಿ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ಒಪ್ಪಿರುತ್ತಾರೆ. |
| | | |

ಸಂಖ್ಯೆ: ಆಕುಕ 35 ಎಸ್ ಟಿ ಕ್ಯೂ 2024

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಸಚಿವರು